ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆ

**ಕರ್ನಾಟಕ ವಿಧಾನ ಪರಿಷತ್ತು**

ನೂರ ನಲವತ್ತೊಂದನೆಯ ಅಧಿವೇಶನ

ಮಂಗಳವಾರ, ದಿನಾಂಕ: 29ನೇ ಸೆಪ್ಟಂಬರ್, 2020

ರಾಜ್ಯದಲ್ಲಿ ಪಡಿತರ ವಿತರಣೆ ಕುರಿತು

ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) :-

987(1045) ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ರಾಜ್ಯದಲ್ಲಿ ಒಟ್ಟು ಪಡಿತರ ವಿತರಣೆ ಮಾಡುವ ವಿತರಣಾ ಸಂಘ-ಸಂಸ್ಥೆ ಮತ್ತು ಪರವಾನಗಿದಾರರ ಸಂಖ್ಯೆಯೆಷ್ಟು ;ಇದರಲ್ಲಿ ಅಂಗವಿಕಲರಿಗೆ ಮೀಸಲಾತಿ ನೀಡಲಾಗಿದೆಯೇ ;(ಸಂಘ-ಸಂಸ್ಥೆಗಳ ಹೆಸರು ಸಮೇತ ವಿವರ ನೀಡುವುದು)

(ಆ) ಪಡಿತರ ವಿತರಣಾ ಪರವಾನಗಿಯನ್ನು ಸಂಘ-ಸಂಸ್ಥೆಗೆ ಹಾಗೂ ಅಂಗವಿಕಲರಿಗೆ ನೀಡಲು ಇರುವ ಮಾನದಂಡವೇನು ಹಾಗೂ ಅವುಗಳನ್ನು ಅನುಸರಿಸಲಾಗಿದೆಯೇ ;

(ಇ) ಪ್ರತಿ ತಿಂಗಳು ಯಾವ ಅವಧಿಯಲ್ಲಿ ಪಡಿತರ ವಿತರಣೆ ಮಾಡಲಾಗುತ್ತಿದೆ ;

(ಈ)ಪರವಾನಗಿ ಹೊಂದಿರುವ ವಿತರಕರು ತಮಗೆ ಅವಕಾಶ ಸಿಕ್ಕಾಗ ಮಾತ್ರ ವಿತರಣೆ ಮಾಡುತ್ತಿರುವುದರಿಂದ, ಜನರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಉ) ಬಂದಿದ್ದಲ್ಲಿ, ನಿಗದಿತ ಅವಧಿಯಲ್ಲಿ ವಿತರಣೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರವನ್ನು ಒದಗಿಸುವುದು)